

## ಕಲ್ಲಿನಲ್ಲಿ ಶಿವಕುಮಾರ ಸ್ವಾಮೀಜಿ

ಈ ಚಿತ್ರದಲ್ಲಿ ಕಾಣುತ್ತಿರುವುದು ತುಮಕೂರು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರ ಮೂರ್ತಿ. ಮಠಕ್ಕೆ ಹೋಗುವ ಹಾದಿಯ ಎಡಗಡೆ ಭಾಗದಲ್ಲಿರುವ ಈ ಮೂರ್ತಿ ನೋಡಿದರೆ ಥೇಟ್ ಶಿವಕುಮಾರ ಸ್ವಾಮೀಜಿಯೇ ನಿಂತಿರುವಂತೆ ಭಾಸವಾಗುತ್ತದೆ. ಬೃಹತ್ ಬಂಡೆಯೊಂದರಲ್ಲಿ ಈ ಮೂರ್ತಿಯನ್ನು ಕೆತ್ತಲಾಗಿದ್ದು, ನೋಡಲು ಅತ್ಯಾಕರ್ಷಕವಾಗಿದೆ. ಕಲಾವಿದನ ಕಲಾ ನೈಪುಣ್ಯತೆಗೆ ಹಿಡಿದ ಕೈಗನ್ನಡಿ ಇದಾಗಿದೆ.

ಜಗದೀಶ ಎಂ. ಸಂಗಣ್ಣವರ, ಬೆಳಗಾವಿ





## ಪರಿಸರ ಸ್ನೇಹಿ ಆಕಾಶ ಬುಟ್ಟಿ

ದೀಪಾವಳಿ ಸಮಯದಲ್ಲಿ ಮನೆ ಮನೆಗಳಲ್ಲಿ ವಿಭಿನ್ನ ವಿನ್ಯಾಸದ, ವೈವಿಧ್ಯಮಯವಾದ ಆಕಾಶ ಬುಟ್ಟಿ ಇಟ್ಟಿರುವುದು ಸಾಮಾನ್ಯವಾಗಿ ಕಾಣುತ್ತದೆ. ಕೆಲವರು ತಾವೇ ಸಿದ್ಧಪಡಿಸಿಕೊಂಡ ಆಕಾಶ ಬುಟ್ಟಿಯನ್ನು ಬಳಸಿಕೊಂಡರೆ, ಇನ್ನು ಕೆಲವರು ಮಾರುಕಟ್ಟೆಯಲ್ಲಿ ಸಿಗುವ ವಿಭಿನ್ನ ಆಕಾರ, ಗಾತ್ರದ ಆಕಾಶ ಬುಟ್ಟಿಯನ್ನು ಖರೀದಿಸಿ ಮನೆಯ ಎದುರು ತೂಗಿ ಹಾಕುತ್ತಾರೆ. ಆದರೆ, ಈ ಚಿತ್ರದಲ್ಲಿ ಕಾಣುವ ಪರಿಸರ ಸ್ನೇಹಿ ಆಕಾಶ ಬುಟ್ಟಿ ಅಪರೂಪದ್ದು. ಈ ಆಕಾಶ ಬುಟ್ಟಿಯು ಯಾವ ಮಾರ್ಕೆಟ್‌ನಲ್ಲಿ ಹುಡುಕಿದರೂ ಸಿಗಲಿಕ್ಕಿಲ್ಲ. ಇದನ್ನು ತೆಂಗಿನ ಹಸಿ ಗರಿಯಿಂದ (ತೆಂಗಿನ ಮಡ್ಲು) ನಾಜೂಕಿನಿಂದ ನೇಯ್ಗೆ ಮಾಡಿ ಸುಂದರವಾಗಿ ಸಿದ್ಧಪಡಿಸಲಾಗಿದೆ. ಕೃಷಿಕರೊಬ್ಬರು ಕಲ್ಪನೆಯಲ್ಲಿ ಮೂಡಿದ್ದನ್ನು ತಮ್ಮ ಕೈಚಳಕದಿಂದ ಅರಳಿಸಿದ್ದಾರೆ. ನೋಡಲು ಬಹಳ ಆಕರ್ಷಕವಾಗಿ ಕಾಣುವ ಈ ಆಕಾಶ ಬುಟ್ಟಿಯು ಪರಿಸರ ಸ್ನೇಹಿಯೂ ಹೌದು.

ಗಣಪತಿ ಹಾಸ್ಪುರ, ಯಲ್ಲಾಪುರ